**ದೇಹ ಮನಸ್ಸು ಮಾಗಿದಂತೆ ಸುಖದ ಅನುಭವ, ಸ್ವರೂಪಗಳು ಬದಲಾಗುತ್ತವೆ. ಮಧುಚಂದ್ರದ ಮುದವನ್ನೇ ಜೀವನವೆಲ್ಲಾ ನಿರೀಕ್ಷಿಸುವುದು ಪ್ರಕೃತಿಯ ನಿಯಮಗಳಿಗೆ ವಿರುದ್ಧವಾಗುತ್ತದೆ.**

ಇರುವುದಿಲ್ಲ. ಹಾಗಾಗಿ ಕೇವಲ ಪ್ರೇಮಿಗಳಾಗಿರುವ ಅವರ ನಡುವಿನ ಕಾಮ ಆಕರ್ಷಣೀಯವಾಗಿರುತ್ತದೆ. ದಂಪತಿಗಳು ಕೂಡ ತಮ್ಮೆಲ್ಲಾ ಜವಾಬ್ದಾರಿಗಳ ನಡುವೆ ಇಂತಹ ಮನಃಸ್ಥಿತಿಯನ್ನು ಉಳಿಸಿಕೊಂಡಾಗ ಹಳೆಯ ದಿನಗಳು ಮತ್ತೆ ಜೀವಂತವಾಗುತ್ತವೆ. ಹೊರಸಂಬಧಗಳ ಒತ್ತಾಸೆ ಮೂಡುವುದಿಲ್ಲ.

ದೇಹ, ಮನಸ್ಸು ಮಾಗಿದಂತೆ ಸುಖದ ಅನುಭವ, ಸ್ವರೂಪಗಳು ಬದಲಾಗುತ್ತವೆ. ಮಧುಚಂದ್ರದ ಮುದವನ್ನೇ ಜೀವನವೆಲ್ಲಾ ನಿರೀಕ್ಷಿಸುವುದು ಪ್ರಕೃತಿಯ ನಿಯಮಗಳಿಗೆ ವಿರುದ್ಧವಾಗುತ್ತದೆ.

ಆಪ್ತಸಲಹೆಗೆ ಬಂದಿದ್ದ ದಂಪತಿಗಳಲ್ಲಿ 'ಗಂಡನಿಗೆ ಹೊರಸಂಬಂಧವಿದೆ' ಎಂದು ಪತ್ನಿ ಹೇಳಿದಾಗ, 'ಇವಳ ಜೊತೆಗೆ ಕೂಡೋದಕ್ಕೆ ನನಗೆ ಆಸಕ್ತಿನೇ ಬರುವುದಿಲ್ಲ' ಎಂದು ಪತಿ ಉತ್ತರಿಸಿದ. 'ಇವರು ಹೇಳಿದ ಹಾಗೆಲ್ಲಾ ನನಗೆ ಮಾಡೋದಕ್ಕೆ ಆಗಲ್ಲ, ಯಾವ ಗರತಿನೂ ಮಾಡೋ ಕೆಲಸ ಅದಲ್ಲ' ಎಂದು ಪತ್ನಿ ಪ್ರತಿಭಟಿಸಿದಾಗ ನಾನು ಕೇಳಿದೆ– ನಿಮ್ಮ ಪತಿಯ ವಿಚಾರ ಬಿಡಿ, ನಿಮಗೆ ಯಾವ ರೀತಿಯ ಕಾಮಕೂಟ ಇಷ್ಟವಾಗುತ್ತದೆ ಹೇಳಿ? ಅವರೆಂದರು – 'ನನಗೆ ಅದರಲ್ಲಿ ಇಷ್ಟಾನೇ ಇಲ್ಲ, ಏನೋ ಇವರ ಒತ್ತಾಯಕ್ಕೆ ಒಪ್ಪಿಕೊಳ್ಳುತ್ತೇನೆ!'



ಇಂತಹ ಸಂಬಂಧದಲ್ಲಿ ಅವಕಾಶ ಸಿಕ್ಕಾಗ ಪತಿ ಹೊರಸಂಬಂಧವನ್ನು ಮಾಡುವುದು ಆಶ್ಚರ್ಯವಲ್ಲ. ಪತಿಗೆ ಬೇಕೆಂದಾಗಲೆಲ್ಲಾ ಸುಖ ಕೊಟ್ಟರೂ ಅವರಿಗೆ ತೃಪ್ತಿಯಾಗುವುದಿಲ್ಲ ಅಥವಾ ಅವರು ಬೇರೆಯವರ ಕಡೆ ಮನಸ್ಸು ಹರಿಸುತ್ತಾರೆ ಎನ್ನುವುದು ಸಾಕಷ್ಟು ಪತ್ನಿಯರ ಅನುಭವ. ಎಷ್ಟು ಸಾರಿ ಸೇರುತ್ತೀರಿ ಎನ್ನುವುದಕ್ಕಿಂತ ಕೂಟದಲ್ಲಿ ಇಬ್ಬರ ಪಾಲುಗೊಳ್ಳುವಿಕೆ ಯಾವ ಮಟ್ಟದಲ್ಲಿದೆ ಎನ್ನುವುದು ತೃಪ್ತಿಯ ಮಟ್ಟವನ್ನು ನಿರ್ಧರಿಸುತ್ತದೆ. ಒಬ್ಬ ಸಂಗಾತಿ ತನು ಮನಗಳೊಂದಿಗೆ ಕೂಟದಲ್ಲಿ ಭಾಗವಹಿಸದಿದ್ದಾಗ ಮತ್ತೊಬ್ಬರಿಗೆ ಕೂಡ ಅದು ಯಾಂತ್ರಿಕ ಕ್ರಿಯೆಯಾಗುತ್ತದೆ.

ಲೈಂಗಿಕತೆ ಎಲ್ಲರ ಮೂಲಪ್ರವೃತ್ತಿ. ಹಾಗಾಗಿ ಯಾರಾದರೂ ತಮಗೆ ಅದರಲ್ಲಿ ಆಸಕ್ತಿ ಇಲ್ಲ ಎಂದುಕೊಂಡರೆ ಅವರಿಗೆ ತಮಗೆ ಇಷ್ಟವಾಗುವಂತಹ ಲೈಂಗಿಕತೆಯನ್ನು ಕಂಡುಕೊಳ್ಳುವುದು ಸಾಧ್ಯವಾಗುವುದಿಲ್ಲ ಎಂದರ್ಥ. ಅಥವಾ ಅಂತಹ ಲೈಂಗಿಕತೆ ಸಿಗುತ್ತದೆ ಎನ್ನುವ ಭರವಸೆಯನ್ನು ಅವರು ಕಳೆದುಕೊಂಡಿರುತ್ತಾರೆ. ಪ್ರಿಯಕರ/ಪ್ರಿಯತಮೆಯಾಗಿ ತಮ್ಮ ಪಾತ್ರವನ್ನು ಅವರು ಸಂಪೂರ್ಣ ಮರೆತು ಇತರ ಪಾತ್ರಗಳನ್ನು ಸಮರ್ಥವಾಗಿ ನಿಭಾಯಿಸುತ್ತಿರುತ್ತಾರೆ. ಇದು ಪತಿ ಪತ್ನಿಯರಿಬ್ಬರಿಗೂ ಸಮಾಧಾನಕರ ಸ್ಥಿತಿಯಾಗಿದ್ದಾಗ ಒತ್ತಾಯದ ಬದಲಾವಣೆಯ ಅಗತ್ಯವೇನಿರುವುದಿಲ್ಲ. ಆದರೆ ಒಬ್ಬರು ಅತೃಪ್ತರಾಗಿ ಉಳಿದಾಗ ಕೌಟುಂಬಿಕ ವ್ಯವಸ್ಥೆ ಏರುಪೇರಾಗಬಹುದು.

ಸಂಗಾತಿಯ ಸುಖಕ್ಕಾಗಿ ಮಾತ್ರವಲ್ಲ ತನಗಾಗಿಯೂ ಇದರಲ್ಲಿ ಪಾಲುಗೊಳ್ಳುತ್ತಿದ್ದೇನೆ



ಸಂಧಿಲಿನ್
SANDHILIN सन्धिलिन

ಗಂಟು ನೋವು, ಬೆನ್ನು ನೋವು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ

ನೋವಿಗೆ ಶೀಘ್ರ ಪರಿಣಾಮಕಾರಿ

CLINICALLY PROVED




- ಜಿಡ್ಡು ರಹಿತ 'ಸಂಧಿಲಿನ್' ಎಣ್ಣೆಯನ್ನು ಆಯುರ್ವೇದದ ಋಷಿಮುನಿಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಇದು ಗಂಟುನೋವು, ಬೆನ್ನುನೋವು, ಉಳುಕು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ ನೋವುಗಳಿಗೆ ಪರಿಣಾಮಕಾರಿ.
- ತ್ವಚೆಗೆ ಹಿತಕರವಾಗಿದ್ದು ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು

SDM AYURVEDA PHARMACY

ISO / GMP CERTIFIED

ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com

ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ